+ **ಶ್ರೀ ಜೆ. ಹೆಚ್. ಪಟೇಲ್ :-** ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಎದುರುಗಡೆಯಲ್ಲಿ ಕುಳಿತುಕೊಳ್ಳುತ್ತಿದ್ದೆವು. ಅವರು ಏನಾದರೂ ಬರೆಯುತ್ತಿದ್ದಾಗ ನಾವುಗಳು ಏನಾದರೂ ಮಾತನಾಡುವುದಕ್ಕೆ ಎದ್ದರೆ ಅವರು ಬರೆಯುವುದನ್ನು ಬಿಟ್ಟು ಕೇಳುತ್ತಿದ್ದರು ಏಕೆಂದರೆ, ಏನಾದರೂ ಒಂದು ಹೊಸ ವಿಷಯವನ್ನು ಹೇಳುತ್ತಾರೆ, ಒಂದು ವಿಚಾರವನ್ನು ಹೇಳುತ್ತಾರೆ, ಅಥವಾ ಏನಾದರೂ ಒಂದು ರಿಪೋರ್ಟ್ ಇರುತ್ತದೆ, ಹಾಸ್ಯ ಇರುತ್ತದೆಂದು, ಅದನ್ನು ಬಿಟ್ಟು ಬೋರ್ ಹೊಡೆಯುವಂತಹ ವಿಚಾರವನ್ನು ಹೇಳಿದರೆ ಮಲಗಲೇಬೇಕಾಗುತ್ತದೆ. ನೀವುಗಳು ಇದೇ ರೀತಿಯಾಗಿ ಮಾಡಿದರೆ, ಅದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇಷ್ಟೇ ಕೇಳಿಕೊಳ್ಳುವುದು. Let the level of the debate be high. ನೀವು ಏನಾದರೂ ಹೇಳಿ, ಸರ್ಕಾರವನ್ನು ಟೀಕೆ ಮಾಡಿ, ಟೀಕೆ ಮಾಡುವುದಕ್ಕೇ ವಿರೋಧ ಪಕ್ಷದವರು ಇರುವುದು ಎಂದು ನನಗೆ ಗೊತ್ತಿದೆ. ನಮ್ಮನ್ನು ಹೊಗಳುವುದಕ್ಕೆ ಅಲ್ಲ. ಸರ್ಕಾರದ ಲೋಪದೋಷಗಳಿದ್ದರೆ ತಾವು ಸರಿಪಡಿಸಬೇಕೆಂದು ನಾವುಗಳೂ ಸಹ ನಿರೀಕ್ಷೆಯನ್ನು ಮಾಡುತ್ತೇವೆ. ಆದರೆ ಸರ್ಕಾರದವರು ಎಷ್ಟೆಷ್ಟು ಒಳ್ಳೆಯ ಕೆಲಸವನ್ನು ಮಾಡಿದರು ಏನು ಹೇಳದಿದ್ದರೆ ಏನು ಮಾಡುವುದು?

ಶ್ರೀ ಬಿ. ಎಸ್. ಯಡಿಯೂರಪ್ಪ :- ತಾವು ಅಧ್ಯಕ್ಷರನ್ನು ಕೇಳಿ ಈ ಸಲದ 10-15 ದಿನಗಳ ಕಾರ್ಯಕಲಾಪಗಳಲ್ಲಿ ಒಂದಾದರೂ ಅನಗತ್ಯವಾಗಿರತಕ್ಕಂಥ ಪ್ರಸ್ತಾಪವನ್ನು ಮಾಡಿದ್ದಾರೆಂದು ಅಧ್ಯಕ್ಷರು ಹೇಳಲಿ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್ :- ಮಾನ್ಯ ಅಧ್ಯಕ್ಷರೇ,

"ನಿಂದಕರು ಇರಬೇಕು, ನಿಂದಕರು ಇರಬೇಕು,
ಹಂದಿ ಇದ್ದರೆ ಕೇರಿ. ಹೇಂಗೋ ಶುದ್ದವೋ ಹ್ಯಾಂಗೆ."

ನಮ್ಮಲ್ಲಿ ಏನಾದರೂ ಕೊಳೆ ಇದ್ದರೆ, ತೆಗೆಯುವುದಕ್ಕೆ ನೀವುಗಳು ಇರಬೇಕು. ಸದನದ ಕಾಲವನ್ನು ನೀವು ಕಳೆಯಲು ಅಲ್ಲ. ಯಾವುದಾದರೂ ಒಂದು ಹಾಸ್ಯವಾದಂತಹ ವಿಷಯವನ್ನಾದರೂ ಅಥವಾ ಕತೆಯನ್ನು ಏನಾದರೂ ಹೇಳಿದರೂ ಸಹ there is some charm in the debate. Let the level of the debate be high. ಯಾವುದೇ ವಿಷಯವನ್ನು ಹೇಗಾದರೂ ಮಾಡಿ. ಅದನ್ನು ಬಿಟ್ಟು ಒಂದೇ ವಿಷಯವನ್ನು 10 ಜನರು ಅದೇ ವಿಷಯವನ್ನು ಹೇಳಿದರೆ ಅದು ಪುನರಾವರ್ತನೆಯಾಗುತ್ತದೆ. ಆ ರೀತಿಯಾಗಿ ಪುನರಾವರ್ತನೆಯನ್ನು ಮಾಡುವುದು ಬೇಡ. ಆ ರೀತಿಯಾಗಿ ಮಾಡಿದರೆ ತೂಕಡಿಕೆ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ನಾವುಗಳು ಮಲಗಿರುವವರಿಗೆ ಎಬ್ಬಿಸಬಹುದು. ಆದರೆ ಬೇಕೆಂತಲೇ ಎಚ್ಚರ ಇದ್ದು ಮಲಗಿದವರಿಗೆ ಸೋಗು ಮಾಡಿದವರಿಗೆ ನಾವುಗಳು ಎಬ್ಬಿಸುವುದಕ್ಕೆ ಆಗುವುದಿಲ್ಲ. ಅಂತಹ ಸರ್ಕಾರ ಈಗ ಬಂದಿದೆ; ನಾವುಗಳು ಏನು ಮಾಡುವುದಕ್ಕೆ ಆಗುತ್ತದೆ?

+ **ಶ್ರೀ ಬಿ. ಎನ್. ಯಡಿಯೂರಪ್ಪ :-** ಮಾನ್ಯ ಅಧ್ಯಕ್ಷರೆ, ಈ ಕಡೆಯಲ್ಲಿ ರತಕ್ಕಂತಹ ಪ್ರತಿಪಕ್ಷದವರ ಪರವಾಗಿ ಹತ್ತಾರು ಉದಾಹರಣೆಗಳನ್ನು ಕೊಡುತ್ತೇನೆ. ನಿಮ್ಮ

ಆಡಳಿತ ಪಕ್ಷದ ಸದಸ್ಯರುಗಳು, ಮಂತ್ರಿಗಳು ಸದನದಲ್ಲಿ ಬಂದು ಕುಳಿತುಕೊಂಡು ಸದನವನ್ನು ನಡೆಸಬೇಕಾಗಿತ್ತು. ಆದರೆ ಒಂದು ದುರಾದೃಷ್ಟ ಏನೆಂದರೆ ವಿರೋಧ ಪಕ್ಷದವರು 30 ಜನ ಸದನಕ್ಕೆ ಬಂದಾಗಲೂ ಸಹ ಆಡಳಿತ ಪಕ್ಷದವರು 3 ಸದಸ್ಯರುಗಳು ಇರುವುದಿಲ್ಲ. ಆ ಪರಿಸ್ಥಿತಿಯಲ್ಲಿ ನಾವುಗಳು ನಿಮ್ಮ ಹತ್ತಿರ ಬಂದು ನಾವುಗಳು ಸದನಕ್ಕೆ ಬಂದಿದ್ದೇವೆ ಸದನವನ್ನು ಪ್ರಾರಂಭವನ್ನು ಮಾಡಿ ಎಂದು ಹೇಳುವಂತಹ ಮಟ್ಟಕ್ಕೆ ಬಂದಿದೆ. ಇಷ್ಟೊಂದು ಬೇಜವಾಬ್ದಾರಿಯಾದಂತಹ ಸರ್ಕಾರ, ಜನರ ಹಿತವನ್ನು ಸಂಪೂರ್ಣವಾಗಿ ಮರೆತು ನೀವುಗಳು ಕಚ್ಚಾಟದಲ್ಲಿ ತೊಡಗಿರಬೇಕಾದರೆ ನಾವು ಏನು ಹೇಳುತ್ತಿದ್ದೆವು ಎಂದರೆ ಈಗ ಶ್ರೀ ಜೆ. ಹೆಚ್. ಪಟೇಲ್‌ರು ಮುಖ್ಯಮಂತ್ರಿಗಳಾಗಿ ಇನ್ನು ಒಂದು ತಿಂಗಳುಗಳಾಗಿದೆ ಎಂದು ಹೇಳಿ ಸ್ವಲ್ಪ ಟೈಮ್‌ನ್ನು ಕೊಡೋಣವೆಂದು ಇದ್ದೆವು. ಇನ್ನು ಮುಂದೆ ಸರ್ಕಾರಕ್ಕೆ ಬಿಸಿಯನ್ನು ಮುಟ್ಟಿಸುತ್ತೇವೆ. ಸದನವನ್ನು ಹೇಗೆ ನಡೆಸುತ್ತೇವೆಂದು ಕಾದು ನೋಡಿ.

ಶ್ರೀ ರಾಮಕೃಷ್ಣ :– ಉತ್ತರ ರೆಡಿಯಾಗಿದ್ದರೆ ತೆಗೆದುಕೊಳ್ಳಿ ಎಂದು ನಾನು ಹೇಳುತ್ತೇನೆ. ಇಲ್ಲ ಎಂದರೆ ನಾಳೆ ದಿವಸ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, ಶ್ರೀ ಯಡಿಯೂರಪ್ಪ ನವರು ಮಾಟಾಳ್ ನಾಗರಾಜ್‌ರವರಿಗೆ ಧರಣಿಯನ್ನು ನಿಲ್ಲಿಸಿ ತಮ್ಮ ಸ್ಥಾನಕ್ಕೆ ಬರಬೇಕೆಂದು ವಿನಂತಿಯನ್ನು ಮಾಡಿಕೊಂಡಿದ್ದಾರೆ. ಆದ್ದರಿಂದ ಅವರು ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕು.

ವಿಷಯ :– ಗುಡ್ಡಹಳ್ಳಿಯಲ್ಲಿ ನ್ಯಾಯಾಲಯದ ತೀರ್ಪಿನ ಸೋಗಿನಿಂದ ಮನೆಗಳ ಸಮಾಧಿ.

+ **ಶ್ರೀ ವೈ. ರಾಮಕೃಷ್ಣ :–** ಗುಡ್ಡಹಳ್ಳಿಯಲ್ಲಿ 20 ನೇ ತಾರೀಖಿನಂದು ಕೋರ್ಟ್ ಆದೇಶವನ್ನು ನೀಡಿದೆ ಎಂಬ ಸೋಗಿನಲ್ಲಿ ಸುಮಾರು 20 ನೇ ತಾರೀಖಿನಂದು ಕೋರ್ಟ್ ಆದೇಶವನ್ನು ನೀಡಿದೆ ಎಂಬ ಸೋಗಿನಲ್ಲಿ ಸುಮಾರು 22 ಆರ್.ಸಿ.ಸಿ. ಮನೆಗಳೂ ಸೇರಿ, ಮೈನ್ ರೋಡ್‌ನಲ್ಲಿ ಕಟ್ಟಿರತಕ್ಕಂತಹ ಮನೆಗಳನ್ನು ಹೊಡ್ದು ಹಾಕಿದ್ದಾರೆ. ಮಾನ್ಯ ಅಧ್ಯಕ್ಷರೆ, ನ್ಯಾಯಾಲಯವು ಕೊಟ್ಟಿರತಕ್ಕಂತಹ ತೀರ್ಪು ನನ್ನ ಹತ್ತಿರ ಇದೆ. ಅದನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಆ ತೀರ್ಪಿನಲ್ಲಿ ಏನು ಬರೆದಿದ್ದಾರೆಯೆ, ``warrant to be exeanted with the police help by breaking open lock". ಆ ಪ್ರತಿವಾದಿಯ ಮನೆಯ ಬಾಗಿಲನ್ನು ಒಡೆದು ಹಾಕಿ ಇವರಿಗೆ ವಶಕ್ಕೆ ಕೊಡಬಹುದು ಎಂದು 10-7-1996 ರಂದು ಕೊಟ್ಟಂತಹ ತೀರ್ಪಿನಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಈ ಆರ್ಡರ್‌ನ್ನು ಉಪಯೋಗಿಸಿಕೊಂಡು "if necessary with the police help" ಎಂದು ಅವರು ಬರೆದಿರತಕ್ಕಂತಹ ಒಂದು ಪದವನ್ನು ಉಪಯೋಗಿಸಿ ಕೊಂಡು ಪ್ರತಿವಾದಿಯ ವಾದಿಗಳು ಸುಮಾರು 100 ಜನರನ್ನು ಟ್ರಕ್‌ಗಳಲ್ಲಿ ಮತ್ತು ಬುಲ್ಡೋಜರ್ ತೆಗೆದುಕೊಂಡು ಬಂದು, ನೋಡಿ ಸ್ವಾಮಿ ಇದು ಬಹಳ ಮುಖ್ಯ ವಾಗಿರುವಂಥದ್ದು. ಬುಲ್ಡೋಜರ್ ತೆಗೆದುಕೊಂಡು ಬಂದು ಪೋಲೀಸ್‌ನವರನ್ನೂ ಸಹ ಕರೆದುಕೊಂಡು ಬಂದು ಅಲ್ಲಿ ಮಾರಮರಿಯಾಗಿ ಮನೆಗಳನ್ನು ಹೊಡೆದು ಹಾಕಿದ್ದಾರೆ. ಅಲ್ಲಿ ಏನೋ ಯುದ್ಧವನ್ನು ಮಾಡಿದ ಹಾಗೆ ಮಾಡಿದ್ದಾರೆ. ಅಲ್ಲಿ ಮನೆಯಿಂದ ಹೊರಗಡೆ

ಹಾಕಿರತಕ್ಕಂತಹ ಜನರಲ್ಲಿ ಬಸರಿಯಾದಂತಹ ಹೆಂಗಸುಗಳಿದ್ದಾರೆ, ಒಂದು ತಿಂಗಳೂ ಸಹ ಆಗಿಲ್ಲ ಇನ್ನೂ ಹೆರಿಗೆ ಆಗಿ. ಮಕ್ಕಳನ್ನು ಮನೆಯಿಂದ ಹೊರಗೆ ಹಾಕಿದ್ದಾರೆ. ಸಾಮಾನುಗಳನ್ನು ಮನೆಯಿಂದ ಹೊರಗಡೆ ಬಿಸಾಕಿದ್ದಾರೆ, ರೇಡಿಯೋ, ಟಿ.ವಿ.ಗಳನ್ನು ಎಲ್ಲವನ್ನೂ ಹೊರಗಡೆ ಬಿಸಾಕಿದ್ದಾರೆ. ಅಲ್ಲಿ ಏನೇನು ಆಗಬೇಕು ಆ ರೀತಿಯಲ್ಲಿ ಮಾಡಿ ನರಕಯಾತನೆಯನ್ನು ಮಾಡಿದ್ದಾರೆ. ಕೋರ್ಟ್‌ನವರು ಕೊಟ್ಟಿರತಕ್ಕಂತಹ ಆರ್ಡರ್ ಏನು? ಪೋಲೀಸ್‌ನವರು ಯಾವ ರೀತಿಯಲ್ಲಿ ಎಕ್ಸಿಕ್ಯೂಟ್ ಮಾಡುತ್ತಿದ್ದಾರೆ? ಅದಕೋಸ್ಕರವಾಗಿ ನಾನು ತಮ್ಮಲ್ಲಿ ಅರಿಕೆಯನ್ನು ಮಾಡಿಕೊಳ್ಳುವುದೇನೆಂದರೆ ನನ್ನ ರಾಜಕೀಯ ಇತಿಹಾಸದಲ್ಲಿ ಇಂತಹ ದೌರ್ಜನ್ಯವನ್ನು ಇದುವರೆಗೆ ನೋಡಿರಲಿಲ್ಲ. ಸತ್ಯ ಹೇಳುತ್ತಿದ್ದೇನೆ. ಇಂತಹ ದೌರ್ಜನ್ಯವು ಯಾವತ್ತೂ ಸಹ ನಡೆದಿಲ್ಲ. ಆ ಮನೆಯಲ್ಲಿ ರತಕ್ಕಂತಹ ಅಮಾಯಕರನ್ನು ಕೋರ್ಟ್‌ಗೆ ಪಾರ್ಟಿಮಾಡಲಿಲ್ಲ. They are not even Respondents. ಇದು ಈ ರೀತಿಯಾದಂತಹ ಪರಿಸ್ಥಿತಿಯು ಇರುವಾಗ, ಅನ್ಯಾಯವಾಗಿ ನೋಟೀಸ್ ಇಲ್ಲದೇ ಆದರಲ್ಲಿಯೂ ಗಂಡಸರುಗಳು ಮನೆಯಲ್ಲಿ ಇಲ್ಲದಿದ್ದಾಗ, ಹೆಂಗಸರು ಮಾತ್ರ ಮನೆಯಲ್ಲಿದ್ದಾಗ ಬುಲ್ಡೋಜರ್‌ನ್ನು ತೆಗೆದುಕೊಂಡು ಹೋಗಿ ಮನೆಗಳನ್ನು ಹೊಡೆದು ಹಾಕಿ ಅವರ ಮನೆಯಲ್ಲಿದ್ದ ಸಾಮಾನುಗಳನ್ನು, ತರಕಾರಿಗಳನ್ನು, ಆಹಾರ ಧಾನ್ಯಗಳನ್ನು ಮನೆಯಿಂದ ಹೊರಗಡೆ ಬಿಸಾಕಿದ್ದಾರೆ. ಅವರ ಆಕ್ರಂದವನ್ನು ಕೇಳುವುದಕ್ಕೆ ಆಗುವುದಿಲ್ಲ. ಅದಕೋಸ್ಕರವಾಗಿ ನಾನು ತಮ್ಮಲ್ಲಿ ಅರಿಕೆಯನ್ನು ಮಾಡಿಕೊಳ್ಳುವುದೇನೆಂದರೆ, ಪೋಲೀಸರ ದೌರ್ಜನ್ಯಕ್ಕೆ ಇದು ನಮ್ಮ ರಾಜ್ಯಕ್ಕೆ ಮೊದಲನೇಯ ಉದಾಹರಣೆಯಾಗಿದೆ. ಆದುದರಿಂದ ಸಂಬಂಧಪಟ್ಟಂಥವರನ್ನು ಕೂಡಲೇ ಅಮಾನತ್ತು ಮಾಡಬೇಕು ಮತ್ತು ಸಿ.ಓ.ಡಿ. ಎನ್‌ಕ್ವೈರಿಯನ್ನು ಮಾಡಬೇಕು. ತಪ್ಪಿದ್ದರೆ ಟ್ರಕ್‌ಗಳನ್ನು ತೆಗೆದುಕೊಂಡು ನೂರಾರು ಜನರುಗಳನ್ನು ಕರೆದುಕೊಂಡು ಬಂದು, ಬುಲ್ಡೋಜರ್‌ಗಳನ್ನು ತೆಗೆದುಕೊಂಡು ಬಂದು ನಾಗರೀಕರ ಮನೆಗಳನ್ನು ಒಡೆದು ಹಾಕಿದವರಿಗೆ.....

MR. SPEAKER :- Let us her from the Govt. you have placed your demand.

SRI R. ROSHAN BAIG :- I have taken note of the views expressed by the Hon'ble Member. I will have the matter examined and I will make a detailed statement,

ಅಧ್ಯಕ್ಷರು :- ಈಗ ನೀರಾವರಿಯ ಸಚಿವರು ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದಕ್ಕೆ ಉತ್ತರವನ್ನು ಕೊಡುತ್ತೀರೋ?

(ಖೂ) ಕಬಿನಿ ಎರಡನೇ ಹಂತ ವರುಣಾ ತಾರಕಾ ಮುಂತಾದ ನೀರಾವರಿ ಕಾಮಗಾರಿಗಳ ಪ್ರಗತಿ.

+ **ಶ್ರೀ ಕೆ. ಎನ್. ನಾಗೇಗೌಡ :-** ಮಾನ್ಯ ಅಧ್ಯಕ್ಷರೆ, ಅವರು ನಾಲ್ಕು ವಿಚಾರಗಳನ್ನು ಕೇಳಿದ್ದಾರೆ. ಅದರಲ್ಲಿ ಕಬಿನಿ ಎರಡನೇ ಹಂತದ ಡೀಟೈಲ್ಡ್ ಇನ್‌ವೆಸ್ಟಿಗೇಷನ್ ಇವತ್ತು ಪ್ರಗತಿಯಲ್ಲಿದೆ. ವರುಣಕ್ಕೆ ಈಗಾಗಲೇ ಉಪಮುಖ್ಯ ಮಂತ್ರಿಗಳು ಹೇಳಿದ ಹಾಗೆ ಅವರ ಎಕ್ಸ್‌ಪೆಂಡಿಚರ್ 168 ಕೋಟಿ ರೂಪಾಯಿ ಇದೆ, ಇಲ್ಲಿಯವರೆಗೆ 69 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1996-97 ಕ್ಕೆ 32 ಕೋಟಿ ರೂಪಾಯಿ ಹಣ ಇಡಲಾಗಿದೆ. ವರುಣ ನಾಲೆ ಬಗ್ಗೆ ನಾವು ಯಾವ ರೀತಿಯ

ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಆದರಂತೆ ಎಲ್ಲಾ ಪೂರ್ಣವಾಗುತ್ತದೆ, ತೊಂದರೆ ಏನೂ ಇಲ್ಲ. ಇನ್ನೂ ತಾರಕಾ ಬಗ್ಗೆ ಕೇಳಿದ್ದಾರೆ. ತಾರಕಾಕ್ಕೆ 1996-97 ರಲ್ಲಿ ಒಂದು ಕೋಟಿ ಹಣ ಇಟ್ಟಿದ್ದೇವೆ. ಇನ್ನೂ ಹೆಚ್ಚು ಹಣ ಒದಗಿಸಬೇಕೆಂಬುದು ನಮ್ಮ ಉದ್ದೇಶ ಇದೆ. ಹಣ ಒದಗಿಸಿ ಆದನ್ನು ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸುವರ್ಣಮತಿಗೆ 1.68 ಕೋಟಿ ರೂಪಾಯಿ ಹಣ ಬೇಕಾಗಿದೆ. ಆದನ್ನು ಈ ವರ್ಷ ಮತ್ತು ಬರುವ ವರ್ಷ, ಎರಡು ವರ್ಷಗಳಲ್ಲಿ ಹಣ ಒದಗಿಸಿ ಪೂರ್ಣ ಮಾಡುತ್ತೇವೆ. ಪಿರಿಯಾಪಟ್ಟಣದ ಎಲ್ಲಾ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ; ಹಣ ಬಿಡುಗಡೆ ಮಾಡಿದ್ದೇವೆ. ವರ್ಕ್ ಫಾಸ್ಟ್ ಪ್ರೋಗ್ರೆಸ್‌ನಲ್ಲಿದೆ.

(ಎ) ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಿಗೆ ಅಧಿಕಾರ ನೀಡದೇ ಇರುವ ಬಗ್ಗೆ.

+ **ಚಂದ್ರಕಾಂತ್ ಜಿ. ಬೆಲ್ಲದ್ :-** ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ, ಈ ಸದನದಲ್ಲಿರುವಂತೆ ಎಲ್ಲಾ ಸದಸ್ಯರಿಗೆ ಗೊತ್ತಿರುವಂತೆ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ, ಹುಬ್ಬಳ್ಳಿ ಏನಿದೆ ಇದು ಉತ್ತರ ಕರ್ನಾಟಕದ ಒಂದು ಹೆಮ್ಮೆಯ ವೈದ್ಯಕೀಯ ಮಹಾವಿದ್ಯಾಲಯ. ಈ ವಿದ್ಯಾಲಯ ಬಹಳ ಅಧೋಗತಿಗೆ ಹೋಗಿತ್ತು ಎಂಬ ವಿಷಯ ಬಹುಶಃ ಉತ್ತರ ಕರ್ನಾಟಕದ ಎಲ್ಲರಿಗೆ ಗೊತ್ತಿದೆ. ಈ ವಿದ್ಯಾಲಯದ ದುಸ್ಥಿತಿಯನ್ನು ಕಂಡು ಸರ್ಕಾರ ಆದನ್ನು ಸ್ವಾಯತ್ತ ಸಂಸ್ಥೆ ಎಂದು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಎಂದು ಮಾಡಿದ್ದಕ್ಕೆ ನಾವು ತುಂಬ ಕೃತಜ್ಞರಾಗಿದ್ದೇವೆ. ಆದರೆ ಅಲ್ಲಿ ಒಬ್ಬ ಡಾ: ನಾಗಲೋತಿಮಠ್ ಎಂದು ಏಷ್ಯಾದಲ್ಲೇ ಉತ್ತಮವಾದ ಹೆಸರು ಪಡೆದಂಥ ಡಾಕ್ಟರು ಹಿಂದೆ ಕೆಎಲ್‌ಇ ಸಂಸ್ಥೆಯ ಜಿಎನ್‌ಎಂಸಿ ಮೆಡಿಕಲ್ ಕಾಲೇಜಿಗೆ ಹೆಸರು ತಂದಂಥ ವೈದ್ಯರು, ಬಿಜಾಪುರದ ಬಿಎಲ್‌ಡಿ. ಸಂಸ್ಥೆಯ ವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಹೋಗಿ ಸೇವೆ ಮಾಡಿದಂಥ ವ್ಯಕ್ತಿ. ಮೈಸೂರಿನ ಸುತ್ತೂರು ಮಠದ ವೈದ್ಯಕೀಯ ವಿದ್ಯಾಲಯದಲ್ಲಿದ್ದವರನ್ನು ತೆಗೆದುಕೊಂಡು ಬಂದರು ಬಹಳ ಸಂತೋಷ. ಅಂಥ ಒಬ್ಬ ಸೇವೆ ಮಾಡಬೇಕೆಂಬ ಡೆಡಿಡಿಕೇಟೆಡ್ ವೈದ್ಯರಿಗೆ ಡೈರೆಕ್ಟರ್ ಎಂಬ ಪದವಿ ಕೊಟ್ಟು ಅಲ್ಲ ಕೂರಿಸಿದ್ದಾರೆ. ಆದರೆ ಇದುವರೆಗೆ ಅಧಿಕಾರ ಕೊಟ್ಟಿಲ್ಲ. ಇವತ್ತು ಅಲ್ಲಿ ಇರಲಿಕ್ಕೆ ಬೇಜಾರಾಗಿ ಅಲ್ಲಿಂದ ಬಿಟ್ಟು ಹೋಗಬೇಕೆಂಬ ಸ್ಥಿತಿಗೆ ಅವರನ್ನು ತಂದಿದ್ದಾರೆ. ಇಂಥ ಒಬ್ಬ ಡೆಡಿಕೇಟೆಡ್ ಡಾ: ನಾಗಲೋತಿಮಠ್ ಎಂಬುವವರು ಏಷ್ಯಾದಲ್ಲೇ ಪೆಥಾಲಜಿಯಲ್ಲಿ ಹೆಸರುವಾಸಿಯಾದ ಡಾಕ್ಟರಿಗೆ ಇದುವರೆಗೆ ಆರ್ಡರ್ ಕಳುಹಿಸಿಲ್ಲ. ದಯವಿಟ್ಟು ಇದರ ಬಗ್ಗೆ ವೈದ್ಯಕೀಯ ಮಹಾ ವಿದ್ಯಾಲಯದ ಸಚಿವರಿದ್ದಾರೆ, ಅವರು ಉತ್ತರ ಕೊಡಬೇಕು. ಈಗಾಗಲೇ ಬಹಳ ದಿನಗಳಿಂದ ನಾವು ಕಾಯುತ್ತಿದ್ದೇವೆ.

ಡಾ: ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) :- ಆವರು ಹೇಳಿದ ಹಾಗೆ ಬಳ್ಳಾರಿ ಮತ್ತು ಹುಬ್ಬಳ್ಳಿಯ ಎರಡು ಮೆಡಿಕಲ್ ಕಾಲೇಜ್‌ಗಳು ಏನಿವೆ ಅವು ಆಟಾನಮಸ್ ಎಂದು ಹಿಂದೆ ತೀರ್ಮಾನವಾಗಿದೆ. ಆದರೆ ಆವರು ಹೇಳಿದಂಥ ಡಾ: ನಾಗಲೋತಿಮಠ್ ಎಂಬುವವರನ್ನು ನಾವು ಅಲ್ಲಿ ಡೈರೆಕ್ಟರ್ ಆಗಿ ಹುಬ್ಬಳ್ಳಿಗೆ ಆಪಾಯಿಂಟ್ ಮಾಡಿದ್ದೇವೆ. ಆದರೆ ನಾವು ಹುಬ್ಬಳ್ಳಿ ಮತ್ತು ಬಳ್ಳಾರಿ ಎರಡನ್ನೂ

ಆಟಾನಮಸ್ ಮಾಡಬೇಕಾದರೆ ಅದಕ್ಕೆ ಒಂದು ಬೈಲಾ ಇದೆ. ಆ ಬೈಲಾ ಅಪ್ರೂವ್ ಆಗಬೇಕು. ಆ ಬೈಲಾವನ್ನು ನಾವು ಕಾನೂನು ಇಲಾಖೆಗೆ ಕಳುಹಿಸಿದ್ದೆವು; ಅದು ಸುಮಾರು ಒಂದೂವರೆ ಎರಡು ತಿಂಗಳಾದ ನಂತರ ಬಂದಿದ. ಈ ತಿಂಗಳ 4 ನೇ ತಾರೀಖು ಗವರ್ನಿಂಗ್ ಕೌನ್ಸಿಲ್ ಮೀಟಿಂಗ್ ಕರೆದು ಬೈಲಾ ಅಪ್ರೂವ್ ಮಾಡಿದ್ದೇವೆ. ಈಗ ಏನಾಗಿದೆ ಎಂದರೆ ಅಲ್ಲಿರತಕ್ಕ ಪ್ರಿನ್ಸಿಪಾಲರನ್ನು ವಾಪಸ್ಸು ಬೆಂಗಳೂರಿಗೆ ಮೈಸೂರಿಗೆ ಬಾಕಬೇಕು ಅಥವಾ ಬೇರೆ ಕಡೆ ವರ್ಗಾವಣೆ ಮಾಡಿ ಅಲ್ಲಿ ಪ್ರಿನ್ಸಿಪಾಲ್, ಡೈರೆಕ್ಟರ್ ನಿನ್ನೆ ಪೋಷ್ಟಿಂಗ್ ಆಗಿದೆ. ಅಲ್ಲಿ ಪ್ರಿನ್ಸಿಪಾಲರು ಹುಬ್ಬಳ್ಳಿಯಲ್ಲಿರತಕ್ಕವರನ್ನು ಬಳ್ಳಾರಿಗೆ ಹಾಕಿದ್ದೇವೆ, ಬಳ್ಳಾರಿ ಯಲ್ಲಿರತಕ್ಕವರನ್ನು ಬೆಂಗಳೂರಿಗೆ ವಾಪಸ್ಸು ಕರೆಯಿಸಿದ್ದೇವೆ. ಯಾವಾಗ ಬೈಲಾ ಒಂದು ಸಾರಿ ಅಪ್ರೂವ್ ಆಯಿತೋ ಆಗ ಅವರಿಗೆ ಅಧಿಕಾರ ಆಟೋಮ್ಯಾಟಿಕ್ ಆಗಿ ಬರುತ್ತದೆ. ನಾನು ಅವರೊಡನೆ ಟೆಲಿಫೋನ್‌ನಲ್ಲಿ ಮಾತನಾಡಿದ್ದೇನೆ. ಬೈಲಾ ಪುಸ್ತಕವನ್ನು ಅಚ್ಚು ಹಾಕುವ ಕೆಲಸವನ್ನು ಅವರಿಗೆ ಕೊಟ್ಟಿದ್ದೇನೆ. ಅವರು ಆ ಕೆಲಸವನ್ನು ವಹಿಸಿಕೊಂಡಿದ್ದಾರೆ. ಅವರು ತಜ್ಞರು ಇದ್ದಾರೆ, ಪರಿಣಿತರು ಇದ್ದಾರೆಂದು ಅವರ ಸಲಹೆ ತೆಗೆದುಕೊಂಡು ನಾವೆಲ್ಲಾ ಮಾಡುವುದು. ಇನ್ನು ಎರಡು ಮೂರು ದಿನಗಳಲ್ಲಿ ಇದೆಲ್ಲಾ ಆಗುತ್ತದೆ, ಅವರಿಗೆ ಅಧಿಕಾರ ಬರುತ್ತದೆ.

ಒಬ್ಬ ಮಾನ್ಯ ಸದಸ್ಯರು :- ಸರ್ಕಾರ ಒಂದು ಪತ್ರ ಬರೆಯಲಿ; ಒಂದು ಪತ್ರ ಬರೆದರೆ ಸಾಕು ಅವರ ಅಧಿಕಾರ ಚಾಲು ಆಗುತ್ತದೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ :- ಇವತ್ತು ಅವಮಾನ ಆಗುವಂಥ ಸ್ಥಿತಿಯಲ್ಲಿದ್ದಂಥ ಡಾಕ್ಟರಿಗೆ ತೀವ್ರವಾಗಿ ಅಧಿಕಾರ ಕೊಟ್ಟು....

ಡಾ. ಎಂ. ಶಂಕರ್ ನಾಯಕ್ :- 4 ನೇ ತಾರೀಖು ಬೈಲಾ ಅಪ್ರೂವ್ ಆಗಿದೆ. ಈಗ ಪ್ರಿನ್ಸಿಪಾಲ್ ರೀಪೋಸ್ಟಿಂಗ್ ಆದ ತಕ್ಷಣ ಅವರಿಗೆ ಬೈಲಾ ಪ್ರಕಾರ ಅಧಿಕಾರ ಕೊಡಲಾಗುತ್ತದೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ :- ಬೈಲಾ ಅಪ್ರೂವ್ ಆದ ತಕ್ಷಣ ಅದರ ಕಾಪಿಯನ್ನು ನಾನು ತಮಗೆ ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು :- ಇವತ್ತು ಸದನ ಸಂಜೆ ಸ್ವಲ್ಪ ಹೊತ್ತು ಕುಳಿತುಕೊಳ್ಳಬೇಕಾಗುತ್ತದೆ. ಆದುದರಿಂದ ಪತ್ರಿಕಾ ಪ್ರತಿನಿಧಿಗಳಲ್ಲಿ ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಹೊಸ ಶಾಸಕರು ಯಾರಿದ್ದಾರೆ, ಸಾಕಷ್ಟು ವಿಕಾಸಗೊಳ್ಳುತ್ತಿರತಕ್ಕವರು ಅವರ ಪ್ರತಿಭೆಯನ್ನು ಜನತೆಗೆ ಪರಿಚಯ ಮಾಡಿಸುವ ದೃಷ್ಟಿಯಿಂದ ನಿಮ್ಮ ಸಹಕಾರ ಅಗತ್ಯ. ನೀವು ಸಂಜೆ ಹೊತ್ತು ಇರುವು ದಿಲ್ಲವೆಂದು ಹೇಳಿದ ತಕ್ಷಣ ಎಲ್ಲರೂ ನಾಳೆ ಮಾತನಾಡುತ್ತೇವೆಂದು ಹೇಳುತ್ತಾರೆ. ದಯಮಾಡಿ ನಿಮ್ಮ ಸಹಕಾರವನ್ನು ಬಯಸುತ್ತಿದ್ದೇನೆ. ಹೊಸ ಶಾಸಕರು ಅನೇಕರನ್ನು ಮಾತನಾಡುವುದಕ್ಕೆ ತೊಡಗಿಸುತ್ತೇನೆ. ಸ್ವಲ್ಪ ತಡವಾಗಿ ಕುಳಿತುಕೊಳ್ಳುತ್ತೇವೆ, ದಯವಿಟ್ಟು ಸಹಕರಿಸಬೇಕು. ಈಗ ಊಟಕ್ಕೆ ಸದನವನ್ನು ಮುಂದೂಡಿ ಪುನಃ 3 ಗಂಟೆಗೆ ಸಮಾವೇಶ ಗೊಳ್ಳೋಣ.